ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-4, January - February 2026, Pp. 5-8
©*IIMRD*, Mysuru
www.iimrd.com

# ಮೈಸೂರು ಜಿಲ್ಲೆಯ ಸೋಲಿಗ ಬುಡಕಟ್ಟು ಜನರ ರಾಜಕೀಯ ಭಾಗವಹಿಸುವಿಕೆ: ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ಡಾ. ಕುಮಾರ್ ಬಿ. ಕೆ**

ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಶಾಲನಗರ

**ಸಾರಾಂಶ: (Abstract)**

*ಈ ಲೇಖನವು ಕರ್ನಾಟಕದ ಮೈಸೂರು ಜಿಲ್ಲೆಯ ಸೋಲಿಗ ಬುಡಕಟ್ಟು ಜನರ ರಾಜಕೀಯ ಭಾಗವಹಿಸುವಿಕೆಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ಸೋಲಿಗರು ತಮ್ಮ ವಿಶಿಷ್ಟ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಯೊಂದಿಗೆ ಬದುಕುತ್ತಿದ್ದು, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅವರ ಪಾಲ್ಗೊಳ್ಳುವಿಕೆಯ ಸ್ವರೂಪ ಗಮನಾರ್ಹವಾಗಿದೆ. ಈ ಅಧ್ಯಯನವು ಮತದಾನ, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿನ ಭಾಗವಹಿಸುವಿಕೆ, ರಾಜಕೀಯ ಜಾಗೃತಿ ಮತ್ತು ನಾಯಕತ್ವದ ಬೆಳವಣಿಗೆ ಮೊದಲಾದ ಅಂಶಗಳ ಮೇಲೆ ಕೇಂದ್ರೀಕರಿಸಿದೆ. ಶಿಕ್ಷಣದ ಕೊರತೆ, ಆರ್ಥಿಕ ಹಿಂದುಳಿದಿರುವಿಕೆ ಹಾಗೂ ಸಾಮಾಜಿಕ ಅಡೆ–ತಡೆಗಳು ರಾಜಕೀಯ ಭಾಗವಹಿಸುವಿಕೆಗೆ ಅಡ್ಡಿಯಾಗುತ್ತಿರುವುದನ್ನು ಲೇಖನವು ವಿವರಿಸುತ್ತದೆ. ಜೊತೆಗೆ, ಸರ್ಕಾರಿ ಯೋಜನೆಗಳು ಮತ್ತು ಮೀಸಲಾತಿ ನೀತಿಗಳ ಪರಿಣಾಮವಾಗಿ ರಾಜಕೀಯ ಜಾಗೃತಿಯಲ್ಲಿ ನಿಧಾನವಾದ ಪ್ರಗತಿ ಕಂಡುಬರುತ್ತಿರುವುದನ್ನೂ ಈ ಲೇಖನವು ಉಲ್ಲೇಖಿಸುತ್ತದೆ. ಈ ಅಧ್ಯಯನವು ಸೋಲಿಗ ಬುಡಕಟ್ಟು ಜನರ ರಾಜಕೀಯ ಸಬಲೀಕರಣಕ್ಕೆ ಹೆಚ್ಚಿನ ಗಮನ ನೀಡಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತದೆ.*

**ಮುಖ್ಯಪದಗಳು (Keywords):** *ಸೋಲಿಗ ಬುಡಕಟ್ಟು, ಪ್ರಜಾಸತ್ತಾತ್ಮಕತೆ, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆ, ಶಿಕ್ಷಣದ ಕೊರತೆ, ಆರ್ಥಿಕ ಹಿಂದುಳಿದಿರುವಿಕೆ, ಮೀಸಲಾತಿ ನೀತಿ.*

## ಪೀಠಿಕೆ

ಭಾರತವು ವೈವಿಧ್ಯತೆಯ ರಾಷ್ಟ್ರವಾಗಿದ್ದು, ಇಲ್ಲಿ ಅನೇಕ ಬುಡಕಟ್ಟು ಸಮುದಾಯಗಳು ತಮ್ಮದೇಯಾದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ವೈಶಿಷ್ಟ್ಯಗಳೊಂದಿಗೆ ಬದುಕುತ್ತಿವೆ. ಇಂತಹ ಬುಡಕಟ್ಟು ಸಮುದಾಯಗಳಲ್ಲಿ ಸೋಲಿಗರು ಪ್ರಮುಖರಾಗಿದ್ದಾರೆ. ಕರ್ನಾಟಕದ ಮೈಸೂರು, ಚಾಮರಾಜನಗರ, ಬನ್ನೂರು ಮತ್ತು ಬಿಳಿಗಿರಿ ರಂಗನಬೆಟ್ಟ ಪ್ರದೇಶಗಳಲ್ಲಿ ಸೋಲಿಗರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ.

## ಸೋಲಿಗರ ಐತಿಹಾಸಿಕ ಹಿನ್ನೆಲೆ

ಮೈಸೂರು ಸಂಸ್ಥಾನದ ಕಾಲದಲ್ಲಿ ಸೋಲಿಗರು ಅರಣ್ಯ ರಕ್ಷಕರು, ದೂತರು ಮತ್ತು ಸೇವಕರಾಗಿ ಕಾರ್ಯನಿರ್ವಹಿಸಿದ್ದರೆಂದು ಐತಿಹಾಸಿಕ ದಾಖಲೆಗಳು ಸೂಚಿಸುತ್ತವೆ. ಮೈಸೂರು ಒಡೆಯರ ಆಳ್ವಿಕೆಯಲ್ಲಿ

*Please cite this article as:* ಕುಮಾರ್, ಬಿ.ಕೆ. (2026). ಮೈಸೂರು ಜಿಲ್ಲೆಯ ಸೋಲಿಗ ಬುಡಕಟ್ಟು ಜನರ ರಾಜಕೀಯ ಭಾಗವಹಿಸುವಿಕೆ: ಒಂದು ಸಮಾಜಶಾಸ್ತ್ರೀಯ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4). ಪು.ಸಂ.* 5–8

ಸೋಲಿಗರಿಗೆ ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಹಕ್ಕು ಮತ್ತು ಕೆಲವು ಸಾಂಪ್ರದಾಯಿಕ ಸೌಲಭ್ಯಗಳು ಇದ್ದವು. ಆದರೂ, ಅವರು ಸಾಮಾಜಿಕವಾಗಿ ಮುಖ್ಯವಾಹಿನಿಯಿಂದ ದೂರವಿದ್ದರು. ನಂತರ ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಅರಣ್ಯಕಾಯ್ದೆಗಳು ಜಾರಿಯಾದವು. ಇದರಿಂದ ಸೋಲಿಗರ ಪರಂಪರಾನುಗತ ಅರಣ್ಯ ಹಕ್ಕುಗಳು ಕಡಿತಗೊಂಡವು. ಅರಣ್ಯ ಪ್ರವೇಶ, ಬೇಟೆ ಮತ್ತು ಆಹಾರ ಸಂಗ್ರಹಣೆಯ ಮೇಲೆ ನಿರ್ಬಂಧಗಳು ವಿಧಿಸಲ್ಪಟ್ಟವು. ಇದರಿಂದ ಅವರ ಜೀವನ ಶೈಲಿಯಲ್ಲಿ ದೊಡ್ಡ ಬದಲಾವಣೆಗಳು ಉಂಟಾದವು ಮತ್ತು ಅನೇಕರು ಆರ್ಥಿಕ ಸಂಕಷ್ಟಕ್ಕೆ ಒಳಗಾದರು.

## ಸ್ವಾತಂತ್ರ್ಯ ನಂತರದ ಕಾಲ

ಭಾರತ ಸ್ವಾತಂತ್ರ್ಯ ಪಡೆದ ನಂತರ ಸೋಲಿಗರನ್ನು ಅಧಿಕೃತವಾಗಿ ಪರಿಶಿಷ್ಟ ಪಂಗಡ ಎಂದು ಗುರುತಿಸಲಾಯಿತು. ಸರ್ಕಾರವು ಶಿಕ್ಷಣ, ಆರೋಗ್ಯ ಮತ್ತು ವಸತಿ ಕ್ಷೇತ್ರಗಳಲ್ಲಿ ಹಲವು ಅಭಿವೃದ್ಧಿ ಯೋಜನೆಗಳನ್ನು ಪರಿಚಯಿಸಿತು. ಆದರೂ ಅರಣ್ಯ ಪುನರ್ವಸತಿ ಯೋಜನೆಗಳ ಪರಿಣಾಮವಾಗಿ ಸೋಲಿಗರು ತಮ್ಮ ಮೂಲ ನೆಲೆಗಳಿಂದ ಸ್ಥಳಾಂತರಗೊಳ್ಳಬೇಕಾಯಿತು.

## ಅಧ್ಯಯನದ ಉದ್ದೇಶಗಳು

1. ಮೈಸೂರು ಜಿಲ್ಲೆಯ ಸೋಲಿಗ ಬುಡಕಟ್ಟು ಜನರ ರಾಜಕೀಯ ಜಾಗೃತಿ ಮಟ್ಟವನ್ನು ತಿಳಿದುಕೊಳ್ಳುವುದು.
2. ಚುನಾವಣೆಗಳಲ್ಲಿ ಅವರ ಭಾಗವಹಿಸುವಿಕೆಯ ಸ್ವರೂಪವನ್ನು ಅಧ್ಯಯನ ಮಾಡುವುದು.
3. ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ಸೋಲಿಗರ ಪಾಲ್ಗೊಳ್ಳುವಿಕೆಯನ್ನು ಪರಿಶೀಲಿಸುವುದು.

## ಸಂಶೋಧನಾ ವಿಧಾನ

ಈ ಅಧ್ಯಯನದಲ್ಲಿ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳನ್ನು ಬಳಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ, ಪ್ರಶ್ನಾವಳಿ, ಗುಂಪು ಚರ್ಚೆಯ ಮುಖಾಂತರ ಸಂಗ್ರಹಿಸಿದರೆ, ಮಾಧ್ಯಮಿಕ ಮಾಹಿತಿಯನ್ನು ಸೋಲಿಗರಿಗೆ ಸಂಬಂಧಿಸಿದ ಪುಸ್ತಕಗಳ ಅಧ್ಯಯನ, ಸಂಶೋಧನಾ ಲೇಖನಗಳು ಹಾಗೂ ಸರ್ಕಾರಿ ವರದಿಗಳ ಅಧ್ಯಯನ ನಡೆಸಲಾಗಿದೆ.

## ಮಾದರಿ ಆಯ್ಕೆ

ಮೈಸೂರು ಜಿಲ್ಲೆಯ ಆಯ್ದ ಸೋಲಿಗ ಗ್ರಾಮಗಳಿಂದ ಯಾದೃಚ್ಛಿಕ ಮಾದರಿ ವಿಧಾನವನ್ನು ಅನುಸರಿಸಲಾಗಿದೆ.

## ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ

ಈ ಅಧ್ಯಯನವು ಮೈಸೂರು ಜಿಲ್ಲೆಯ ಸೋಲಿಗ ಬುಡಕಟ್ಟು ಜನರಿಗೆ ಸೀಮಿತವಾಗಿದ್ದು, ಅವರ ರಾಜಕೀಯ ಪಾಲ್ಗೊಳ್ಳುವಿಕೆಯ ವಿವಿಧ ಆಯಾಮಗಳನ್ನು ಒಳಗೊಂಡಿದೆ. ಈ ಅಧ್ಯಯನವು;

- ಬುಡಕಟ್ಟು ಅಭಿವೃದ್ಧಿ ನೀತಿಗಳನ್ನು ರೂಪಿಸಲು ಸಹಾಯಕವಾಗುತ್ತದೆ

- ರಾಜಕೀಯ ಒಳಗೊಳ್ಳುವಿಕೆಯನ್ನು ಹೆಚ್ಚಿಸಲು ಮಾರ್ಗದರ್ಶನ ನೀಡುತ್ತದೆ
- ಸಮಾಜಶಾಸ್ತ್ರೀಯ ಅಧ್ಯಯನಗಳಿಗೆ ಮಾಹಿತಿಯ ಆಧಾರವಾಗುತ್ತದೆ.

ಸೋಲಿಗರು ಅರಣ್ಯಾಧಾರಿತ ಜೀವನ ನಡೆಸುತ್ತಿದ್ದ ಬುಡಕಟ್ಟು ಸಮುದಾಯವಾಗಿದ್ದಾರೆ. ಅವರು ತಮ್ಮದೇ ಆದ ಸಂಪ್ರದಾಯ, ಭಾಷೆ ಮತ್ತು ಧಾರ್ಮಿಕ ನಂಬಿಕೆಗಳನ್ನು ಹೊಂದಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಕಾನೂನುಗಳು, ಪುನರ್ವಸತಿ ಯೋಜನೆಗಳ ಕಾರಣದಿಂದ ಅವರ ಜೀವನ ಶೈಲಿಯಲ್ಲಿ ಬದಲಾವಣೆಗಳು ಕಂಡುಬಂದಿವೆ.

**ಸೋಲಿಗರ ರಾಜಕೀಯ ಭಾಗವಹಿಸುವಿಕೆಯ ಸ್ವರೂಪ**

ಬಹುತೇಕ ಸೋಲಿಗರು ಮತದಾನದ ಮಹತ್ವವನ್ನು ಅರಿತಿದ್ದು, ಚುನಾವಣೆಯಲ್ಲಿ ಮತ ಚಲಾಯಿಸುತ್ತಿದ್ದಾರೆ. ಆದರೆ ಕೆಲವು ಪ್ರದೇಶಗಳಲ್ಲಿ ಮಾಹಿತಿ ಕೊರತೆಯಿಂದ ಮತದಾನ ಪ್ರಮಾಣ ಕಡಿಮೆಯಾಗಿದೆ.

**ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವಿಕೆ**

ಮೀಸಲಾತಿ ವ್ಯವಸ್ಥೆಯ ಮೂಲಕ ಕೆಲವು ಸೋಲಿಗರು ಗ್ರಾಮ ಪಂಚಾಯಿತ್ ಸದಸ್ಯರು ಹಾಗೂ ಅಧ್ಯಕ್ಷರಾಗಿದ್ದಾರೆ. ಇದರಿಂದ ಸ್ಥಳೀಯ ಆಡಳಿತದಲ್ಲಿ ಅವರ ಧ್ವನಿ ಕೇಳಿಸಿಕೊಳ್ಳಲು ಅವಕಾಶ ದೊರೆತಿದೆ. ಕೆಲವು ರಾಜಕೀಯ ಪಕ್ಷಗಳು ಬುಡಕಟ್ಟು ಮತಗಳನ್ನು ಆಕರ್ಷಿಸಲು ಪ್ರಯತ್ನಿಸುತ್ತಿದ್ದರೂ, ಸೋಲಿಗರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರೆಯುತ್ತಿಲ್ಲ ಎಂಬ ಅಭಿಪ್ರಾಯ ಜನರಲ್ಲಿ ಇದೆ.

**ರಾಜಕೀಯ ಭಾಗವಹಿಸುವಿಕೆಗೆ ಅಡ್ಡಿಯಾಗುವ ಅಂಶಗಳು**

1. ಶಿಕ್ಷಣದ ಕೊರತೆ
2. ಆರ್ಥಿಕ ಹಿಂದುಳಿದಿರುವಿಕೆ
3. ರಾಜಕೀಯ ಮಾಹಿತಿ ಮತ್ತು ಜಾಗೃತಿಯ ಅಭಾವ
4. ನಾಯಕತ್ವದ ಕೊರತೆ
5. ವಿಶಿಷ್ಟ ಭಾಷೆ ಮತ್ತು ಭೌಗೋಳಿಕ ಅಂತರ

**ಸರ್ಕಾರದ ಯೋಜನೆಗಳು ಮತ್ತು ಅವುಗಳ ಪರಿಣಾಮ**

ಸರ್ಕಾರವು ಜನರಿಗಾಗಿ ಮೀಸಲಾತಿ, ಶಿಕ್ಷಣ ಸೌಲಭ್ಯಗಳು, ರಾಜಕೀಯ ಪ್ರತಿನಿಧಿತ್ವವನ್ನು ಒದಗಿಸಿದೆ. ಇವುಗಳಿಂದ ರಾಜಕೀಯ ಪಾಲ್ಗೊಳ್ಳುವಿಕೆ ನಿಧಾನವಾಗಿ ಹೆಚ್ಚುತ್ತಿರುವುದು ಕಂಡುಬರುತ್ತಿದೆ. ಆದರೂ ಯೋಜನೆಗಳ ಸಮರ್ಪಕ ಅನುಷ್ಠಾನ ಅಗತ್ಯವಾಗಿದೆ.

**ಕಂಡುಬಂದ ಪ್ರಮುಖ ಫಲಿತಾಂಶಗಳು**

- ಸೋಲಿಗರಲ್ಲಿ ರಾಜಕೀಯ ಜಾಗೃತಿ ನಿಧಾನವಾಗಿ ಹೆಚ್ಚುತ್ತಿದೆ.
- ಪಂಚಾಯತ್ ಮಟ್ಟದಲ್ಲಿ ಪಾಲ್ಗೊಳ್ಳುವಿಕೆ ಹೆಚ್ಚು ಕಂಡುಬಂದಿದೆ.
- ಉನ್ನತ ಮಟ್ಟದ ರಾಜಕೀಯ ಪ್ರತಿನಿಧಿತ್ವ ಕಡಿಮೆಯಾಗಿದೆ.

- ಶಿಕ್ಷಣ ಹೊಂದಿದ ಯುವಕರು ಹೆಚ್ಚು ರಾಜಕೀಯ ಆಸಕ್ತಿ ತೋರುತ್ತಿದ್ದಾರೆ.

**ಸಲಹೆಗಳು**

1. ರಾಜಕೀಯ ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹೆಚ್ಚಿಸಬೇಕು.
2. ಬುಡಕಟ್ಟು ಯುವಕರಿಗೆ ನಾಯಕತ್ವ ತರಬೇತಿ ನೀಡಬೇಕು.
3. ಸರ್ಕಾರಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು.
4. ಸ್ಥಳೀಯ ಭಾಷೆಯಲ್ಲಿ ಮಾಹಿತಿ ನೀಡಬೇಕು.

**ಉಪಸಂಹಾರ**

ಇತ್ತೀಚಿನ ದಶಕಗಳಲ್ಲಿ ಸೋಲಿಗ ಸಮುದಾಯದಲ್ಲಿ ಶಿಕ್ಷಣದ ಮಹತ್ವ ಮತ್ತು ಅರಿವು ಹೆಚ್ಚಾಗುತ್ತಿದೆ. ಯುವಕರು ಶಾಲೆ ಮತ್ತು ಕಾಲೇಜು ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ. ಅರಣ್ಯ ಹಕ್ಕು ಕಾಯ್ದೆ ಮೂಲಕ ಕೆಲವು ಹಕ್ಕುಗಳನ್ನು ಮರಳಿ ಪಡೆಯುವ ಪ್ರಯತ್ನಗಳು ನಡೆಯುತ್ತಿವೆ. ಇದರೊಂದಿಗೆ ಸೋಲಿಗರು ಸಾಮಾಜಿಕ ಮತ್ತು ರಾಜಕೀಯವಾಗಿ ನಿಧಾನವಾಗಿ ಮುಖ್ಯವಾಹಿನಿಗೆ ಸೇರುತ್ತಿದ್ದಾರೆ. ಮೈಸೂರು ಜಿಲ್ಲೆಯ ಸೋಲಿಗ ಬುಡಕಟ್ಟು ಜನರ ರಾಜಕೀಯ ಭಾಗವಹಿಸುವಿಕೆ ಇನ್ನೂ ಸಂಪೂರ್ಣವಾಗಿ ಅಭಿವೃದ್ಧಿಯಾಗಿಲ್ಲದಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಧನಾತ್ಮಕ ಬದಲಾವಣೆಗಳು ಕಂಡುಬರುತ್ತಿವೆ. ಶಿಕ್ಷಣ, ಜಾಗೃತಿ ಮತ್ತು ಸರ್ಕಾರದ ಬೆಂಬಲದಿಂದ ಸೋಲಿಗರು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವ ಸಾಧ್ಯತೆ ಇದೆ. ಇದರಿಂದ ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲೂ ಸುಧಾರಣೆ ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಶೇಷಗಿರಿ.ಎಲ್ ಎಸ್., ಕರ್ನಾಟಕ ಬುಡಕಟ್ಟು ಜನಾಂಗಗಳು, ಕರ್ನಾಟಕ ಸರ್ಕಾರ.
- *Census of India-Scheduled Tribes.* (2011). Government of India,.
- Elwin. (2003). *The Tribals of India.* Oxford University Press.
- *Mysore District Gazetteer.* (1927). Government of Karnataka